ಒಂದನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಃ ನ್ಯಾಯಾಲಯ, ಮದ್ದೂರು

ಓಎಸ್ 201/2023 ಪಿಡಬ್ಲ್ಯೂ-1

ದಿನಾಂಕಃ 16-06-2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿಯ ಪರ ಮಾನ್ಯ ಶ್ರೀ.ಡಿಎಂವೈ ವಕೀಲರಿಂದಃ--**

ನನ್ನ ತಂದೆಯ ಹೆಸರು ಕರಿಯಪ್ಪ. ಅವರ ತಂದೆಯ ಹೆಸರು ನೆನಪಿಲ್ಲ. ಎಲ್ಲಾ ಆಸ್ತಿಗಳು ನನ್ನ ತಾತನಿಗೆ ಸೇರಿರುತ್ತದೆ. ಈ ದಾವೆಯನ್ನು 2 ಐಟಂಗಳಿಗೆ ಸಂಬಂಧಪಟ್ಟಂತೆ ಹಾಕಿರುತ್ತೇನೆ. ಮಹದೇವಯ್ಯನ ಮಗ ಮತ್ತು ಶಾಂತಯ್ಯ ರವರ ವಿರುದ್ಧ ಹೂಡಿರುತ್ತೇನೆ. ನನ್ನ ತಂದೆಗೆ 8 ಜನ ಮಕ್ಕಳು ಇರುತ್ತೇವೆ. 1 ನೇ ಮಹದೇವ, 2 ನೇ ಮಲ್ಲಮ್ಮ, 3 ನೇ ಶಾಂತಮಲ್ಲಯ್ಯ, 4 ನೇ ಪಾರ್ವತಮ್ಮ ಅಂದರೆ ನಾನು, 5 ನೇ ಮಲ್ಲಮ್ಮ, 6 ನೇ ಪುಟ್ಟಮ್ಮ, 7 ನೇ ಸಾಕಮ್ಮ, 8 ನೇ ಅಪ್ಪಾಜಿ. ಇವರುಗಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಲಾಗಿದೆ. ನಾನು, ಮಲ್ಲಮ್ಮ, ಪುಟ್ಟಮ್ಮ ರವರು ಬದುಕಿರುತ್ತೇವೆ. ಉಳಿದವರು ಮೃತಪಟ್ಟಿರುತ್ತಾರೆ. ಅವರ ವಾರಸುದಾರರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಲಾಗಿದೆ. ಶಾಂತಮಲ್ಲಯ್ಯನಿಗೆ ಇಬ್ಬರು ಹೆಂಡತಿಯವರು ಇರುತ್ತಾರೆ. 1 ನೇ ತಾಯಮ್ಮ, 2 ನೇ ಲಕ್ಷಮ್ಮ. ತಾಯಮ್ಮನಿಗೆ ಮಕ್ಕಳು ಇರುವುದಿಲ್ಲ, ಲಕ್ಷಮ್ಮ ರವರಿಗೆ ಮಾತ್ರ ಮಕ್ಕಳು ಇರುತ್ತಾರೆ. ತಾಯಮ್ಮ ಜೀವಂತ ಇರುತ್ತಾರೆ. ತಾಯಮ್ಮ ರವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ. ಅವರು ಅವರ ತಂದೆಯ ಮನೆಯಲ್ಲಿರುತ್ತಾರೆ. ಮಹದೇವ ರವರಿಗೆ ಒಬ್ಬನೇ ಮಗ ಹರ್ಷ ಆಗಿರುತ್ತಾರೆ. ಆತ ಶ್ರೀರಂಗಪಟ್ಟಣದಲ್ಲಿ ವಾಸವಾಗಿರುತ್ತಾರೆ. ಶಾಂತಮಲ್ಲಯ್ಯನ 1 ನೇ ಹೆಂಡತಿ ತಾಯಮ್ಮ ತನ್ನ ತವರು ಮನೆಯಲ್ಲಿರುತ್ತಾರೆ, ಆದ ಕಾರಣ ಅವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ. ತಾಯಮ್ಮ ರವರು ಈಗಲೂ ಸಹ ಕುಂದನಕುಪ್ಪೆ ಗ್ರಾಮದಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಕೆರಗೋಡಿನಲ್ಲಿ ವಾಸವಾಗಿದ್ದಾರೆ ಎನ್ನುತ್ತಾರೆ. ತಾಯಮ್ಮನಿಗೆ ಮಾತ್ರ ಹಕ್ಕು ಇರುತ್ತದೆ, ಲಕ್ಷಮ್ಮ ರವರಿಗೆ ಹಕ್ಕು ಇಲ್ಲ ಎಂದರೆ ಸರಿಯಲ್ಲ. ತಾಯಮ್ಮ ಜೀವಂತ ಇರುವಾಗಲೇ ಲಕ್ಷಮ್ಮ ರವರನ್ನು ವಿವಾಹವಾಗಿರುವುದರಿಂದ ಅವರಿಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಅವರಿಗೆ ಭಾಗಾಂಶ ಕೊಡಬೇಕಾಗುತ್ತದೆ ಎಂದು ಉದ್ದೇಶಪೂರ್ವಕವಾಗಿ ನಾವು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ.

ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಎಂದು ತೋರಿಸಲು ಪಹಣಿಗಳನ್ನು ಕೊಟ್ಟಿರುತ್ತೇವೆ. ನನ್ನ ತಂದೆಯ ಹೆಸರಿನಲ್ಲಿರುವ ದಾಖಲೆಗಳು ನನಗೆ ಗೊತ್ತಿತ್ತು, ಆಗಾಗಿ ತಂದಿರುತ್ತೇನೆ. ರಾಘವೇಂದ್ರ ಮತ್ತು ಹರ್ಷ ರವರು ಒಟ್ಟು ಕುಟುಂಬದ ವ್ಯವಹಾರವನ್ನು ಮಾಡುತ್ತಿದ್ದಾರೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ಊರಿನಲ್ಲಿ ಇಲ್ಲದ ಕಾರಣ ಆತ ಬೇರೆ ಕಡೆ ವಾಸವಾಗಿರುತ್ತಾರೆ, ಅವರು ಒಟ್ಟು ಕುಟುಂಬದ ವ್ಯವಹಾರವನ್ನು ಮಾಡುತ್ತಿಲ್ಲ ಎಂದರೆ ಸರಿಯಲ್ಲ.

ಆತನೊಂದಿಗೆ ಜಗಳ ಮಾಡಿ ಊರಿನಿಂದ ಹೊರ ಹಾಕಿರುತ್ತೇವೆ ಎಂದರೆ ಸರಿಯಲ್ಲ. ಈ ಹಿಂದೆಯೇ ಎಲ್ಲಾ ಆಸ್ತಿಗಳನ್ನು ವಿಭಾಗ ಕೊಡಲಾಗಿದೆ, 1 ನೇ ಮಾತು ಕೇಳಿ ನಾನು ಈ ಸುಳ್ಳು ದಾವೆ ಹೂಡಿರುತ್ತೇನೆಂದರೆ ಸರಿಯಲ್ಲ. ಈ ಹಿಂದೆಯೇ ನನಗೆ 20 ಗುಂಟೆ ಆಸ್ತಿಯನ್ನು ಭಾಗಾಂಶ ಕೊಟ್ಟಿದ್ದು ಅದನ್ನು ನಾನು ಮಾರಾಟ ಮಾಡಿದ್ದೇನೆಂದರೆ ಸರಿಯಲ್ಲ. ಭಾಗಾಂಶವನ್ನು ಕೋರಿ ಪಂಚಾಯಿತಿಗೆ ಸೇರಿಸಿದ್ದೇವು ಎಂಬ ವಿಚಾರ ಸುಳ್ಳಿನಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಶಾಂತಮಲ್ಲಯ್ಯ ಮತ್ತು ಮಹದೇವ ರವರಿಗೆ ಸೇರಿದ ಆಸ್ತಿಗಳಾಗಿರುವುದರಿಂದ ನಮಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ 1 ನೇ ಪ್ರತಿವಾದಿಯ ಮಾತುಕೇಳಿ ಈ ಸುಳ್ಳು ದಾವೆ ಹೂಡಿ, ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿಯಾಗಿದೆಂದು ಒಪ್ಪಿರುತ್ತಾರೆ.

ಒಂದನೇ ಅಪರ ಸಿವಿಲ್ ಮತ್ತು ಜೆಎಂಎಫ್,ಸಿ,
ನ್ಯಾಯಾಧೀಶರು, ಮದ್ದೂರು.

**ಸಾಕ್ಷಿಯ ಸಹಿಃ**